ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

ಉಪತಹಶೀಲ್ದಾರರ ಕಾರ್ಯಾಲಯ, ಮರಿಯಮ್ಮನಹಳ್ಳಿ ರವರ ನ್ಯಾಯಾಲಯದಲ್ಲಿ

| ವಾದಿ | ಪ್ರತಿವಾದಿ |
|---|---|
| ಶ್ರೀ ಬಿ.ಚಿನ್ನಬೋಸಪ್ಪ | ಶ್ರೀ ಬಿ.ಬೊಮ್ಮಪ್ಪ |
| ತಾಯಿ ಬಂಗಾರಮ್ಮ | ತಾಯಿ ಬಂಗಾರಮ್ಮ |
| ಚಿಲಕನಹಟ್ಟಿಗ್ರಾಮ ಹೊಸಪೇಟೆ ತಾಲೂಕು | ಚಿಲಕನಹಟ್ಟಿಗ್ರಾಮ. ಹೊಸಪೇಟೆ ತಾಲೂಕು |

*******

ಪೀಠಿಕೆ:-

ವಾದಿಯಾದ ಶ್ರೀ ಬಿ.ಚಿನ್ನಬೋಸಪ್ಪ. ತಾಯಿ ಬಂಗಾರಮ್ಮ. ಚಿಲಕನಹಟ್ಟಿ ಗ್ರಾಮ. ಹೊಸಪೇಟೆ ತಾಲೂಕು ಇವರು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಚಿಲಕನಹಟ್ಟಿ ಗ್ರಾಮದ ಸ.ನಂ 162/ಎಂ ವಿಸ್ತೀರ್ಣ 0.19. ಸ.ನಂ.162/ಡಿ ವಿಸ್ತೀರ್ಣ 0.17, ಸ.ನಂ. 162/ಕ್ಯು ವಿಸ್ತೀರ್ಣ 0.36 ಎಕರೆ ಜಮೀನುಗಳನ್ನು ಕ್ರಯದ ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುವ ಮೇರೆಗೆ, ನಮೂನೆ-21 ನ್ನು ಮುದ್ರಿಸಿ ಗ್ರಾಮಲೆಕ್ಕಿಗರು, ಚಿಲಕನಹಟ್ಟಿ ಇವರಿಗೆ ಜಾರಿ ಮಾಡಲು ನೀಡಿದ್ದು, ಸಂಬಂಧಪಟ್ಟವರಿಗೆ ಜಾರಿ ಮಾಡಿ, ಗ್ರಾಮದಲ್ಲಿ ಪ್ರಚುರ ಪಡಿಸಿರುತ್ತಾರೆ. ನಿಗಧಿತ ಅವಧಿಯೊಳಗೆ ಪ್ರತಿವಾದಿಗಳಾದ ಬಿ.ಬೊಮ್ಮಪ್ಪ ತಾಯಿ ಬಂಗಾರಮ್ಮ ಇವರು ದಿನಾಂಕ 11.12.2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು, ಕಂದಾಯ ನಿರೀಕ್ಷಕರು ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೈಸರ್ಗಿಕ ನ್ಯಾಯದ ಹಿತ ದೃಷ್ಟಿಯಿಂದ ಎರಡು ಪಕ್ಷದವರಿಗೆ ಅವಕಾಶ ನೀಡಿ, ಪ್ರಕರಣದ ವಿಚಾರಣೆಯನ್ನು ದಿನಾಂಕ 14.12.2015 ರಂದು ಪ್ರಾರಂಭಿಸಿ ದಿನಾಂಕ 14.03.2016 ರಂದು ಮುಕ್ತಾಯಗೊಳಿಸಲಾಯಿತು.

ವಾದಿಯು ವಿಚಾರಣೆಗೆ ಹಾಜರಾಗಿ, ವಾದವನ್ನು ಮಂಡಿಸುತ್ತಾ, ಚಿಲಕನಹಟ್ಟಿ ಗ್ರಾಮದ ಸ.ನಂ 162/ಎಂ ವಿಸ್ತೀರ್ಣ 0.19. ಸ.ನಂ.162/ಡಿ ವಿಸ್ತೀರ್ಣ 0.17, ಸ.ನಂ. 162/ಕ್ಯು ವಿಸ್ತೀರ್ಣ 0.36 ಎಕರೆ ಜಮೀನುಗಳನ್ನು ಶ್ರೀ ಬಡಕಪ್ಪ ತಾಯಿ ಮುಕುಡಮ್ಮ ಇವರಿಂದ ನೊಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ 3976/14-15, 3974/14-15, 3972/14-15 ದಿನಾಂಕ 13-11-2014 ರಂದು ಕ್ರಮವಾಗಿ ರೂ. 1,16,000/-, 1,04,000/-, 57,000/- ಗಳಿಗೆ ಕ್ರಯಕ್ಕೆ ಪಡೆದಿದ್ದು, ನೊಂದಾಯಿತ ಕ್ರಯ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಕೋರಿರುತ್ತಾರೆ.

ಪ್ರತಿವಾದಿಯು ವಿವಾದಸ್ಪದ ಜಮೀನುಗಳು ಈ ಹಿಂದೆ ಪಿತ್ರಾರ್ಜಿತ ಜಮೀನುಗಳು ಆಗಿದ್ದು. ಸದರಿ ಜಮೀನುಗಳ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತವೆ. ಕಾರಣ ಸದ್ರಿ ಜಮೀನುಗಳನ್ನು ಹಕ್ಕು ಬದಲಾವಣೆ ಮಾಡಬಾರದೆಂದು ಲಿಖಿತ ರೂಪದಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಿಚಾರಣೆ ಹಾಜರಾಗಿದ್ದು ಪೂರಕ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ತಾಲೂಕಾ ಕಛೇರಿ, ಹೊಸಪೇಟೆ.
TALUKA OFFICE, HOSPET.

ಕಡತ ಸಂಖ್ಯೆ:
ದಿನಾಂಕ:

2ನೇ ಪುಟಕ್ಕೆ.....

ವಾದಿಯ ವಾದವನ್ನು ಆಲಿಸಿ ಮತ್ತು ಪ್ರತಿವಾದಿಯು ಪೂರಕ ದಾಖಲೆಗಳನ್ನು ಸಲ್ಲಿಸಿ ತಮ್ಮ ಹಕ್ಕನ್ನು ಸಾಬೀತು ಪಡಿಸುವಲ್ಲಿ ವಿಫಲರಾಗಿರುವುದರಿಂದ ವಿವಾದಸ್ಪದ ಜಮೀನುಗಳನ್ನು ಖಂಡಿತ ಕ್ರಯಕ್ಕೆ ಪಡೆದಿರುವ ಪ್ರಯುಕ್ತ ಈ ಕೆಳಕಂಡಂತೆ

**<u>ಆದೇಶ</u>**

ಸಂ/ಕಂ/ನಾಕಮ/ತಕರಾರು/19. 20. 21/2014-15 ದಿನಾಂಕ : 16.05.2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆ. ಸಂದರ್ಭ ವಾಸ್ತವಾಂಶ, ಕಾರಣಗಳಿಂದ ಹೊಸಪೇಟೆ ತಾಲೂಕು ಚಿಲಕನಹಟ್ಟಿ ಗ್ರಾಮದ ಸ.ನಂ 162/ಎಂ ವಿಸ್ತೀರ್ಣ 0.19. ಸ.ನಂ.162/ಡಿ ವಿಸ್ತೀರ್ಣ 0.17. ಸ.ನಂ. 162/ಕ್ಯು ವಿಸ್ತೀರ್ಣ 0.36 ಎಕರೆ ಜಮೀನುಗಳನ್ನು ವಾಹಿವಾಟು ಸಂಖ್ಯೆ 23. 24. ಮತ್ತು 26. ಹಾಗೂ ನೊಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ 3976/14-15. 3974/14-15. 3972/14-15 ದಿನಾಂಕ 13-11-2014 ರ ಮತ್ತು ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರಿಗೆ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ. ಗಣಕೀರಣ ಮಾಡಿಸಿ. ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ 16.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪ ತಹಶೀಲ್ದಾರರು
ನಾಡ ಕಛೇರಿ, ಮರಿಯಮ್ಮನಹಳ್ಳಿ
ಉಪತಹಶೀಲ್ದಾರರು
ನಾಡಕಛೇರಿ. ಮರಿಯಮ್ಮನಹಳ್ಳಿ

ಗೆ.
ವಾದಿ ಮತ್ತು ಪ್ರತಿವಾದಿಗೆ.

ಪ್ರತಿಯನ್ನು ಭೂಮಿ ಶಾಖೆ. ಹೊಸಪೇಟೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ

T
L M
B. ಚಿನ್ನಬೋವಿ ಪ್ಪ